

# ಖಾದಿ ಕಾಟನ್ ಸಿಲ್ಕ್ ಸೀರೆ

ಈಗೀಗ ರೇಷ್ಮೆ ಸೀರೆಗಿಂತಲೂ ಖಾದಿ ಕಾಟನ್ ಸಿಲ್ಕ್ ಸೀರೆಗೇ ಹೆಚ್ಚು ಬೇಡಿಕೆ. ಉದ್ಯೋಗಸ್ಥರಿಗೆ, ಯುವತಿಯರಿಗೆ ಖಾದಿ ಸೀರೆ, ಸಲ್ವಾರ್ ಧರಿಸುವುದೇ ಟ್ರೆಂಡ್ ಎನಿಸಿದೆ. ಖಾದಿ ಸಿಲ್ಕ್ ಸೀರೆ ಉಟ್ಟುಕೊಳ್ಳಲು ಹಬ್ಬ, ಮದುವೆಯಂತಹ ವಿಶೇಷ ದಿನಗಳೇ ಬರಬೇಕು ಎಂದೇನಿಲ್ಲ. ಯಾವಾಗ ಬೇಕಾದರೂ ಜರಿಯಂಚು, ಕುಚ್ಚು ನೇಯ್ದ ಸೆರಗಿನ ರೇಷ್ಮೆ ಸೀರೆಯ ಜೊತೆ ಡಿಸೈನರ್ ರವಿಕೆ ತೊಟ್ಟು, ಮ್ಯಾಚಿಂಗ್ ಆಭರಣಗಳನ್ನು ಧರಿಸಿ ಸಂಭ್ರಮಿಸಲು ಯುವತಿಯರು ಇಷ್ಟಪಡುತ್ತಿದ್ದಾರೆ.

ಬೇಡಿಕೆಗೆ ತಕ್ಕಂತೆ ಮೈಸೂರು ಸಿಲ್ಕ್, ಪೈಠಣಿ, ಬನಾರಸ್, ಕಾಂಜೀವರಂ, ಪೋಚಂಪಲ್ಲಿ… ಹೀಗೆ ಥರಾವರಿ ರೇಷ್ಮೆ ಸೀರೆಗಳು, ಡಿಸೈನರ್ ಸೀರೆಗಳು ಲಭ್ಯವಾದರೂ ಕಳೆದ ಕೆಲ ವರ್ಷಗಳಿಂದೀಚೆಗೆ ಖಾದಿ ಕಾಟನ್ ಸಿಲ್ಕ್ ಸೀರೆ ಮಹಿಳೆಯರ ಮೆಚ್ಚುಗೆ ಗಳಿಸುತ್ತಿದೆ; ಮೋಹ ಹೆಚ್ಚುತ್ತಿದೆ.

ಖಾದಿ ಸಿಲ್ಕ್ ಸೀರೆ, ಖಾದಿ ಕಾಟನ್, ಖಾದಿ ಪ್ರಿಂಟೆಡ್ ಸಿಲ್ಕ್ ಸೀರೆ, ಖಾದಿ ಪಟ್ಟು… ಹೀಗೆ ಸರಣಿಯಂತೆ ಸಿಗುವ ಖಾದಿ ಸೀರೆಗಳಲ್ಲದೆ ಇದರಲ್ಲೇ ಹಗುರವಾದ, ಮೆತ್ತನೆಯ 'ಖಾದಿ ಸಾಫ್ಟ್ ಸೀರೆ'ಗಳೂ ಈಗೀಗ ಹೆಚ್ಚು ಗಮನಸೆಳೆಯುತ್ತಿವೆ. ಇದಕ್ಕೆ ಕಾರಣ ಧರಿಸಲು ಸುಲಭ, ಆರಾಮದಾಯಕ ಮೇಲಾಗಿ ಇಂಥ ಸೀರೆಗಳು ನೀಡುವ ರಾಯಲ್ ಲುಕ್. ಇಂತಹ ಸೀರೆಗಳು ನಿತ್ಯ ಕಚೇರಿಗಳಿಗೆ ಹೋಗುವ ಮಹಿಳೆಯರಿಗೂ ಸೂಕ್ತ ಎನಿಸಿವೆ.

ರೇಷ್ಮೆ ಸೀರೆಗಳನ್ನೂ ಮೀರಿಸಿ ಲುಕ್ ಕೊಡುವ ಈ ಖಾದಿ ಸಿಲ್ಕ್ ಸೀರೆಗಳು ಕೈಗೆಟಕುವ ಬೆಲೆಯಲ್ಲೂ ಲಭ್ಯ.

ಸಿಲ್ಕ್ ಸೀರೆಗಳು ಚೆನ್ನಾಗಿ ಒಪ್ಪುತ್ತವೆ. ಜರಿ ಬಾರ್ಡರ್ ಹಾಗೂ ಪ್ರಿಂಟೆಡ್ ಪಲ್ಲು ಸೀರೆಗಳು ಮದುವೆಯಂತಹ ಅದ್ದೂರಿ ಕಾರ್ಯಕ್ರಮಗಳಿಗೆ ಸರಿಹೊಂದುತ್ತವೆ. ಈ ಎಲ್ಲ ಸೀರೆಗಳನ್ನು ವಯೋಮಾನದ ಭೇದವಿಲ್ಲದೆ ಯಾರು ಬೇಕಾದರೂ ಆರಾಮವಾಗಿ ಉಟ್ಟುಕೊಳ್ಳಬಹುದು.

## ಸಂಪ್ರದಾಯಕ್ಕೂ ಸೈ

ಮಂಗಳಗಿರಿ ಸೀರೆಗಳು ಎಥ್ನಿಲ್ ಲುಕ್ ಕೊಡುವುದರಿಂದ ಸಾಂಪ್ರದಾಯಿಕ ಮನೋಭಾವವುಳ್ಳ ಮಹಿಳೆಯರಿಗೆ ಅತ್ಯಂತ ಸೂಕ್ತವಾಗಿವೆ. ದೇವಸ್ಥಾನ, ಪೂಜೆ ಪುನಸ್ಕಾರದಂತಹ ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗುವಾಗ ಇಂಥ ಸೀರೆಗಳನ್ನು ಆರಾಮವಾಗಿ ಉಡಬಹುದು. ಹಾಗೆಂದು ಸಾಂಪ್ರದಾಯಿಕ ಮನೋಭಾವದ ಮಹಿಳೆಯರು ಮಾತ್ರ ಇದನ್ನು ಉಡಬೇಕೆಂದಿಲ್ಲ. ಆಧುನಿಕ ಮನೋಭಾವದ ಮಹಿಳೆಯರು, ನಿತ್ಯ ಕಚೇರಿಗಳಿಗೆ, ಕಾಲೇಜಿಗೆ ತೆರಳುವ ಯುವತಿಯರು, ಸೆಲೆಬ್ರಿಟಿಗಳು… ಹೀಗೆ ಸಮಾಜದ ಎಲ್ಲ ಸ್ತರದ ಮಹಿಳೆಯರು ಕೂಡ ಈ ಸೀರೆಯನ್ನು ಇಷ್ಟಪಟ್ಟು ತೊಡಬಹುದು.

ಹಬ್ಬದ ಸಂದರ್ಭದಲ್ಲಿ ಮಾತ್ರವಲ್ಲದೆ, ಮದುವೆ ಮುಂಜಿಗಳಂಥ ಶುಭ ಸಮಾರಂಭ, ಫ್ರೆಂಡ್‌ಶಿಪ್ ಡೇ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನಗಳಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ ಸಹ ಮಂಗಳಗಿರಿ ಸೀರೆ ಉಟ್ಟುಕೊಳ್ಳಬಹುದು. ಈಗೀಗ ಫ್ಯಾಷನಬಲ್ ಲುಕ್ ಬಯಸುವ ಹುಡುಗಿಯರೂ ಇದನ್ನು ಇಷ್ಟಪಡುತ್ತಾರೆ. ಮದುವೆ ಸಂದರ್ಭಗಳಲ್ಲಂತೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಹೆಚ್ಚು ಒತ್ತು ಕೊಡುವುದು ಫ್ಯಾಷನ್‌ಗೇ.

ಸೀರೆಯಲ್ಲದೆ ಸಲ್ವಾರ್, ದುಪಟ್ಟಾಗಳು ಕೂಡ ಮಂಗಳಗಿರಿ ಮಾದರಿ ಬಟ್ಟೆಗಳಲ್ಲಿ ಲಭ್ಯ. ಈ ವಿಶಿಷ್ಟ ಸೀರೆ ತನ್ನ ವೈವಿಧ್ಯದಿಂದಾಗಿ ನಮ್ಮ ದೇಶ ಮಾತ್ರವಲ್ಲದೆ ವಿದೇಶಗಳಲ್ಲಿ ಕೂಡ ಹೆಸರು ಗಳಿಸುತ್ತಿದೆ. ಅಂದದ ವಿನ್ಯಾಸ, ಸುಂದರವಾದ ಬಣ್ಣಗಳಿಂದ ಮಹಿಳೆಯರ ಗಮನಸೆಳೆಯುತ್ತಿದೆ.

ಸೀರೆಯ ಮೇಲೆ ಕೈಕುಸುರಿಯಿಂದ ಮಾಡಿದ ಕಲಾತ್ಮಕ ವಿನ್ಯಾಸದಿಂದಾಗಿ ಸೀರೆ ಮದುವೆ ಹೆಣ್ಣಿಗೂ ಮೆಚ್ಚುವಂತಿದೆ; ಮದುವೆ, ರಿಸೆಪ್ಷನ್‌ಗಳಂತಹ ಸಮಾರಂಭಗಳಿಗೆ ಉಟ್ಟುಕೊಳ್ಳಲು ಯೋಗ್ಯವಾಗಿದೆ. ರೇಷ್ಮೆ ಜರಿಗಳಿಂದ ಮಾಡಿದ ವಿನ್ಯಾಸ ಮಹಿಳೆಯರ ಮನಸೂರೆಗೊಳ್ಳುವಂತಿದೆ. ಕಡುಬಣ್ಣಗಳಿಂದ ಕೂಡಿದ ಸೀರೆ ಚಿತ್ತಾಕರ್ಷಕವಾಗಿದ್ದಲ್ಲದೆ ಸೀರೆಯ ಪಲ್ಲು ಅತ್ಯಂತ ಸೊಗಸಾಗಿದೆ. ಹಬ್ಬದ ಸಂಭ್ರಮವನ್ನು ಇಮ್ಮಡಿಸುವ ಮಂಗಳಗಿರಿ ಸೀರೆ ಮಹಿಳೆಯರ ಸಂಗ್ರಹದಲ್ಲಿ ಸ್ಥಾನ ಪಡೆದುಕೊಳ್ಳಲಿ. ಹಾಗೆ ನೋಡಿದರೆ, ಹಿಂದೆಯೂ ಮಂಗಳಗಿರಿ ಸೀರೆ ಇತ್ತು, ಇದು ದಿಢೀರ್ ಆಗಿ ಮಾರುಕಟ್ಟೆಗೆ ಪ್ರವೇಶಿಸಿದ ಸೀರೆಯಲ್ಲ. ಹಿಂದೆಯೂ ಈ ಸೀರೆಯನ್ನು ಮಹಿಳೆಯರು ಇಷ್ಟಪಟ್ಟು ಉಟ್ಟುಕೊಳ್ಳುತ್ತಿದ್ದರು. ಆದರೆ ಈಗ ಹೊಸ ಹೊಸ ತಂತ್ರಜ್ಞಾನ, ಆಧುನಿಕ ವಿನ್ಯಾಸ, ಆಕರ್ಷಕ ಶೈಲಿಯಿಂದ ಈ ಸೀರೆ ತಯಾರಾಗುವ ಕಾರಣ ಹೆಚ್ಚು ಬೇಡಿಕೆ ಗಳಿಸುತ್ತಿದೆ. ಅಂದಾಜು 1500 ರೂಪಾಯಿಗಳಿಂದ 8000 ರೂಪಾಯಿಗಳವರೆಗೂ ಈ ಸೀರೆ ಲಭ್ಯ.

ಸೀರೆಯೂ ಸೇರಿದಂತೆ ಎಲ್ಲ ಉಡುಗೆಗಳಿಗೆ ಹಬ್ಬದ ಪ್ರಯುಕ್ತ ಭಾರೀ ರಿಯಾಯಿತಿ ದರದಲ್ಲಿ ಮಾರಾಟದ ಭರಾಟೆ ಆರಂಭವಾಗಿದೆ. ಶ್ರಾವಣ ಕಳೆದ ಮೇಲೆ ಬರುವ ಎಲ್ಲ ಹಬ್ಬಗಳಿಗೂ ವಿಧ ವಿಧದ ರೇಷ್ಮೆ ಸೀರೆಗಳು, ಫ್ಯಾನ್ಸಿ ಸೀರೆಗಳನ್ನು ಕೊಂಡು ತಿಜೋರಿ ತುಂಬಿಸಿಕೊಳ್ಳಿ.